# ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ ಅಧಿನಿಯಮ, 1993

(1993ರ ಅಧಿನಿಯಮ ಸಂಖ್ಯೆ 64)

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 37 ರಿಂದ 41 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


**ಅಧ್ಯಾಯ – I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಅನ್ವಯ, ಪ್ರಾರಂಭ, ಅವಧಿ ಮತ್ತು ಉಳಿಕೆ
2. ಪರಿಭಾಷೆ

**ಅಧ್ಯಾಯ – II**

**ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ**

3. ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ರಚನೆ
4. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು
5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು
6. ಖಾಲಿಸ್ಥಾನ ಮುಂತಾದವು ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು
7. ಆಯೋಗವು ಕಾರ್ಯವಿಧಾನವನ್ನು ವಿನಿಯಮಿಸುವುದು

**ಅಧ್ಯಾಯ – III**

**ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು**

8. ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**ಅಧ್ಯಾಯ – IV**

**ಸಂಕೀರ್ಣ**

9. ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಸದಸ್ಯರು ಹಾಗೂ ಆಯೋಗದ ಸಿಬ್ಬಂದಿಯು ಲೋಕನೌಕರರಾಗಿರುವುದು
10. ಕೇಂದ್ರ ಸರ್ಕಾರವು ಆಯೋಗದೊಡನೆ ಸಮಾಲೋಚಿಸುವುದು
11. ವಾರ್ಷಿಕ ವರದಿ
12. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಅಥವಾ ವಿಧಾನ ಸಭೆಯ ಮುಂದೆ ಇಡುವುದು
13. ಅಧಿಕಾರಗಳ ಪ್ರತ್ಯಾಯೋಜನೆ
14. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
15. ನಿಯಮ ರಚನಾಧಿಕಾರ

# ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ ಅಧಿನಿಯಮ, 1993

(1993ರ ಅಧಿನಿಯಮ ಸಂಖ್ಯೆ 64)

[ಸೆಪ್ಟೆಂಬರ್ 4, 1993]

ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗವನ್ನು ರಚಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ನಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ - I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಅನ್ವಯ, ಪ್ರಾರಂಭ, ಅವಧಿ ಮತ್ತು ಉಳಿಕೆ.-** (1) ಈ ಅಧಿನಿಯಮವನ್ನು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಸಮಗ್ರ ಭಾರತಕ್ಕೆ ಅನ್ವಯಿಸುತ್ತದೆ.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ *ದಿನಾಂಕದಂದು ಜಾರಿಗೆ ಬರತಕ್ಕದ್ದು.

* ಆಗಸ್ಟ್ 18, 1994ರಂದು ಜಾರಿಗೆ ಬಂದಿದೆ. 12-8-1994ರ ಅಧಿಸೂಚನೆ ಸಂಖ್ಯೆ : ಎಸ್.ಓ.591 (ಇ) ನೋಡಿ.

(4) ಇದು 2004ನೆಯ ಇಸವಿಯ ಫೆಬ್ರವರಿ 29ನೇ ದಿನಾಂಕದ ತರುವಾಯ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು. ಆದರೆ, ಹಾಗೆ ನಿಂತುಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟುಬಿಟ್ಟ ಕಾರ್ಯಗಳಿಗೆ ಸಂಬಂಧಪಟ್ಟಂತೆ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಹಾಗೆ ನಿಂತುಹೋದ ತರುವಾಯ ಸಾಮಾನ್ಯ ಖಂಡಗಳ ಅಧಿನಿಯಮ, 1897ರ 6ನೆಯ ಪ್ರಕರಣವು, ಈ ಅಧಿನಿಯಮವನ್ನು ಒಂದು ಕೇಂದ್ರ ಅಧಿನಿಯಮದಿಂದ ನಿರಸನಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಪೇಕ್ಷಿಸಿರುವ ಹೊರತು,-

(ಎ) "ಅಧ್ಯಕ್ಷ" ಎಂದರೆ ಆಯೋಗದ ಅಧ್ಯಕ್ಷ;

(ಬಿ) "ಆಯೋಗ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಿದ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ;

(ಸಿ) "ಸದಸ್ಯ" ಎಂದರೆ ಆಯೋಗದ ಸದಸ್ಯ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಸಫಾಯಿ ಕರ್ಮಚಾರಿ" ಎಂದರೆ ಮಾನವ ಮಲ-ಮೂತ್ರವನ್ನು ಕೈಯಿಂದ ಸಾಗಿಸುವ ಕೆಲಸದಲ್ಲಿ ಅಥವಾ ಯಾವುದೇ ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಅಥವಾ ಆ ಕೆಲಸಕ್ಕಾಗಿ ನಿಯೋಜಿತನಾಗಿರುವ ವ್ಯಕ್ತಿ;

(ಎಫ್) "ಉಪಾಧ್ಯಕ್ಷ" ಎಂದರೆ ಆಯೋಗದ ಉಪಾಧ್ಯಕ್ಷ.

## ಅಧ್ಯಾಯ - II

## ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ

**3. ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ರಚನೆ.**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಎಂದು ಕರೆಯಲಾಗುವ ಒಂದು ನಿಕಾಯವನ್ನು, ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ರಚಿಸತಕ್ಕದ್ದು.

(2) ಆಯೋಗವು, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕೆ ಸಂಬಂಧಪಟ್ಟ ಕ್ಷೇತ್ರದಲ್ಲಿನ ಉನ್ನತ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ,-

(ಎ) ಒಬ್ಬ ಅಧ್ಯಕ್ಷನನ್ನು;

(ಬಿ) ಒಬ್ಬ ಉಪಾಧ್ಯಕ್ಷನನ್ನು;

(ಸಿ) ಐವರು ಸದಸ್ಯರನ್ನು

- ಒಳಗೊಂಡಿರತಕ್ಕದ್ದು:

ಪರಂತು, ಸದಸ್ಯರ ಪೈಕಿ ಕನಿಷ್ಠ ಒಬ್ಬ ಮಹಿಳೆ ಇರತಕ್ಕದ್ದು.

**4. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.**- (1) ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂರು ವರ್ಷ ಮೀರದ ಅವಧಿಯವರೆಗೆ ಅಥವಾ 1997ರ ಮಾರ್ಚ್ 31 ರವರೆಗೆ - ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಹಾಗೆ ಪದಧಾರಣ ಮಾಡಿರುವ ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು ತಮ್ಮ ತಮ್ಮ ಪದಗಳನ್ನು 1997ರ ಮಾರ್ಚ್ 31 ರಂದು ತೆರವು ಮಾಡತಕ್ಕದ್ದು:

ಮತ್ತೂ ಪರಂತು, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭದ ತರುವಾಯ ನೇಮಕಗೊಂಡ ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಅಥವಾ 2002ರ ಮಾರ್ಚ್ 31 ರವರೆಗೆ - ಇದರಲ್ಲಿ ಯಾವುದು ಮುಂಚೆಯೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, 2001ನೇ ಇಸವಿ ಫೆಬ್ರವರಿ 16 ರಂದು ಅಥವಾ ಆ ತರುವಾಯ ನೇಮಕಗೊಂಡ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷ ಮೀರದ ಅವಧಿಯವರೆಗೆ ಅಥವಾ 2004ರ ಫೆಬ್ರವರಿ 29ರ ವರೆಗೆ - ಇವೆರಡರಲ್ಲಿ ಯಾವುದು ಮುಂಚೆಯೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಒಬ್ಬ ಸದಸ್ಯನು ಕೇಂದ್ರ ಸರ್ಕಾರವನ್ನು ಉದ್ದೇಶಿಸಿ ಅದಕ್ಕೆ ಲಿಖಿತ ನೋಟೀಸನ್ನು ನೀಡುವ ಮೂಲಕ ಯಾವುದೇ ಸಮಯದಲ್ಲಿ ಸಂದರ್ಭಾನುಸಾರವಾಗಿ ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಸದಸ್ಯನ ಪದಕ್ಕೆ ರಾಜೀನಾಮೆ ನೀಡಬಹುದು.

(3) ಕೇಂದ್ರ ಸರ್ಕಾರವು, ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಅಥವಾ ಒಬ್ಬ ಸದಸ್ಯನನ್ನು, ಅವನು,-

(ಎ) ಅವಿಮುಕ್ತ ದಿವಾಳಿಯಾದರೆ;

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ;

(ಸಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ;

(ಡಿ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಅಸಮರ್ಥನಾದರೆ;

(ಇ) ಗೈರು ಹಾಜರಾಗಲು ಆಯೋಗದಿಂದ ಅನುಮತಿ ಪಡೆಯದೆ ಆಯೋಗದ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಎಫ್) ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಸದಸ್ಯನ ಪದವನ್ನು ದುರುಪಯೋಗ ಪಡಿಸಿಕೊಂಡಿದ್ದು, ಅವನನ್ನು ಅಂಥ ಪದದಲ್ಲಿ ಮುಂದುವರೆಸುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವುದೆಂದು ಕೇಂದ್ರ ಸರ್ಕಾರವು ಅಭಿಪ್ರಾಯ ಪಟ್ಟರೆ

– ಅವನನ್ನು ಪದದಿಂದ ತೆಗದು ಹಾಕಬಹುದು:

ಪರಂತು, ಅಹವಾಲನ್ನು ಹೇಳಿಕೊಳ್ಳಲು ಆ ವ್ಯಕ್ತಿಗೆ ಒಂದು ಯುಕ್ತ ಅವಕಾಶ ನೀಡುವವರೆಗೆ ಅವನನ್ನು ಈ ಖಂಡದ ಮೇರೆಗೆ ತೆಗೆದು ಹಾಕತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಮೇರೆಗೆ ಅಥವಾ ಇತರೆ ರೀತಿಯಲ್ಲಿ ಉಂಟಾದ ಖಾಲಿ ಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ತುಂಬತಕ್ಕದ್ದು ಮತ್ತು ಹಾಗೆ ನಾಮ ನಿರ್ದೇಶನಗೊಂಡ ವ್ಯಕ್ತಿಯು, ಅಂತಹ ಖಾಲಿ ಸ್ಥಾನವು ಉಂಟಾಗಿರದಿದ್ದರೆ ಅವನಿಗೆ ಮುಂಚೆ ಆ ಸ್ಥಾನದಲ್ಲಿದ್ದ ವ್ಯಕ್ತಿಯ ಪೂರ್ವಾಧಿಕಾರಿಯು ಯಾವ ಅವಧಿಯವರೆಗೆ ಪದದಲ್ಲಿರ ಬಹುದಾಗಿತ್ತೋ ಆ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು.**– (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಆಯೋಗವು ದಕ್ಷ ರೀತಿಯಲ್ಲಿ ಕರ್ತವ್ಯಗಳನ್ನು ನೆರವೇರಿಸಲು ಅಗತ್ಯವಾಗಬಹುದಾದಷ್ಟು ಅಧಿಕಾರಿಗಳನ್ನು ಮತ್ತು ನೌಕರರನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ಖಾಲಿ ಸ್ಥಾನ ಮುಂತಾದವು ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.**– ಆಯೋಗದಲ್ಲಿ ಯಾವುದೇ ಸ್ಥಾನವು ಖಾಲಿಯಿದೆಯೆಂಬ ಅಥವಾ ಆಯೋಗದ ರಚನೆಯಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಆಯೋಗದ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ ಮತ್ತು ಅದು ಅಸಿಂಧುವಾಗತಕ್ಕದ್ದಲ್ಲ.

**7. ಆಯೋಗವು ಕಾರ್ಯ ವಿಧಾನವನ್ನು ವಿನಿಯಮಿಸುವುದು.**– (1) ಆಯೋಗವು ಅವಶ್ಯವಿದ್ದಾಗಲೆಲ್ಲಾ ಸಭೆ ಸೇರತಕ್ಕದ್ದು ಮತ್ತು ಅಧ್ಯಕ್ಷನು ಸೂಕ್ತವೆಂದು ಯೋಚಿಸಬಹುದಾದಂತಹ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

(2) ಆಯೋಗವು ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಆಯೋಗದ ಅಧ್ಯಕ್ಷನಾಗಲಿ ಅಥವಾ ಅಧ್ಯಕ್ಷನಿಂದ ಈ ಸಂಬಂಧವಾಗಿ ಕ್ರಮಬದ್ಧವಾಗಿ ಅಧಿಕೃತನಾದ ಆಯೋಗದ ಯಾರೇ ಇತರೆ ಅಧಿಕಾರಿಯಾಗಲಿ ಅಧಿಪ್ರಮಾಣಿಸತಕ್ಕದ್ದು.

## ಅಧ್ಯಾಯ – III

## ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**8. ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು.–** ಆಯೋಗವು ಈ ಕೆಳಕಂಡ ಎಲ್ಲ ಅಥವಾ ಆ ಪೈಕಿ ಯಾವುದೇ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು, ಎಂದರೆ:– (ಎ) ಸಫಾಯಿ ಕರ್ಮಚಾರಿಗಳ ಸ್ಥಾನಮಾನದಲ್ಲಿ, ಸೌಲಭ್ಯಗಳಲ್ಲಿ ಮತ್ತು ಅವಕಾಶಗಳಲ್ಲಿಯ ಅಸಮಾನತೆಗಳನ್ನು ತೊಡೆದು ಹಾಕುವ ಸಲುವಾಗಿ ಕಾಲಬದ್ಧ ಕ್ರಿಯಾ ಯೋಜನೆ ಅಡಿಯಲ್ಲಿ ನಿರ್ದಿಷ್ಟ ಕ್ರಿಯೆಯ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(ಬಿ) ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಪುನರ್ ವ್ಯವಸ್ಥೆಗೆ ಸಂಬಂಧಪಟ್ಟ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನದ ಅಧ್ಯಯನ ಮತ್ತು ಪರಾಮರ್ಶೆ ಮಾಡುವುದು ಮತ್ತು ಅಂತಹ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಸಮನ್ವಯಗೊಳಿಸಲು ಮತ್ತು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(ಸಿ) ನಿರ್ದಿಷ್ಟ ಕುಂದು–ಕೊರತೆಗಳನ್ನು ತನಿಖೆ ಮಾಡುವುದು ಮತ್ತು ಈ ಕೆಳಕಂಡ, ಎಂದರೆ,–

(i) ಸಫಾಯಿ ಕರ್ಮಚಾರಿಗಳ ಯಾವುದೇ ಸಮೂಹಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು;

(ii) ಸಫಾಯಿ ಕರ್ಮಚಾರಿಗಳ ಕಷ್ಟ ಕಾರ್ಪಣ್ಯಗಳನ್ನು ಕಡಿಮೆ ಮಾಡಲು ಉದ್ದೇಶಿಸಿರುವ ತೀರ್ಮಾನಗಳನ್ನು, ಮಾರ್ಗದರ್ಶನಗಳನ್ನು ಅಥವಾ ಸೂಚನೆಗಳನ್ನು;

(iii) ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಯ ಕ್ರಮಗಳನ್ನು;

(iv) ಸಫಾಯಿ ಕರ್ಮಚಾರಿಗಳಿಗೆ ಅನ್ವಯವಾಗುವ ಯಾವುದೇ ಕಾನೂನಿನ ಉಪಬಂಧಗಳನ್ನು

–ಅನುಷ್ಠಾನಗೊಳಿಸದೆ ಇರುವ ಬಗ್ಗೆ ತಾನಾಗಿಯೇ ಗಮನಕ್ಕೆ ತೆಗೆದುಕೊಳ್ಳುವುದು ಮತ್ತು ಅಂತಹ ವಿಷಯಗಳನ್ನು ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದೊಂದಿಗೆ ವ್ಯವಹರಿಸುವುದು;

(ಡಿ) ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ಯಾವುವೇ ತೊಂದರೆಗಳನ್ನು ಅಥವಾ ಅಸಮರ್ಥತೆಗಳನ್ನು ಗಣನೆಗೆ ತೆಗೆದುಕೊಂಡು, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಕಳುಹಿಸುವುದು;

(ಇ) ಕೇಂದ್ರ ಸರ್ಕಾರವು ತನಗೆ ಉಲ್ಲೇಖಿಸಬಹುದಾದ ಯಾವುದೇ ಇತರ ವಿಷಯ.

(2) ಆಯೋಗವು, (1)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸರ್ಕಾರದಿಂದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದಿಂದ ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

## ಅಧ್ಯಾಯ – IV

### ಸಂಕೀರ್ಣ

**9. ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಸದಸ್ಯರು ಹಾಗೂ ಆಯೋಗದ ಸಿಬ್ಬಂದಿಯು ಲೋಕನೌಕರರಾಗಿರುವುದು.**- ಅಧ್ಯಕ್ಷನು, ಉಪಾಧ್ಯಕ್ಷನು, ಸದಸ್ಯರು, ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು ಭಾರತದ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರರಾಗಿರುವರೆಂದು ಭಾವಿಸತಕ್ಕದ್ದು.

**10. ಕೇಂದ್ರ ಸರ್ಕಾರವು ಆಯೋಗದೊಡನೆ ಸಮಾಲೋಚಿಸುವುದು.**- ಕೇಂದ್ರ ಸರ್ಕಾರವು ಸಫಾಯಿ ಕರ್ಮಚಾರಿಗಳಿಗೆ ಸಂಬಂಧಪಡುವ ಎಲ್ಲಾ ಪ್ರಮುಖ ನೀತಿಯ ವಿಷಯಗಳ ಸಂಬಂಧದಲ್ಲಿ ಆಯೋಗದೊಡನೆ ಸಮಾಲೋಚನೆ ನಡೆಸತಕ್ಕದ್ದು.

**11. ವಾರ್ಷಿಕ ವರದಿ.**- ಆಯೋಗವು ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಚಟುವಟಿಕೆಗಳ ಪೂರ್ಣ ವಿವರ ನೀಡುವ ವಾರ್ಷಿಕ ವರದಿಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಸಮಯದೊಳಗೆ ಸಿದ್ಧಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

**12. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಅಥವಾ ವಿಧಾನ ಸಭೆಯ ಮುಂದೆ ಇಡುವುದು.**- (1) ಕೇಂದ್ರ ಸರ್ಕಾರವು, ವಾರ್ಷಿಕ ವರದಿಯಲ್ಲಿ ಒಳಗೊಂಡಿರುವ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವಿವರಿಸುವ ಮತ್ತು ಅಂಥ ಯಾವುದೇ ಶಿಫಾರಸ್ಸನ್ನು ಒಪ್ಪದೆ ಇರಲು ಕಾರಣಗಳೇನಾದರೂ ಇದ್ದರೆ, ಅವುಗಳನ್ನು ತಿಳಿಸುವ ಜ್ಞಾಪನ ಪತ್ರದೊಂದಿಗೆ ವಾರ್ಷಿಕ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡಲು ವ್ಯವಸ್ಥೆ ಮಾಡತಕ್ಕದ್ದು.

(2) ಸದರಿ ವರದಿಯು ಅಥವಾ ಅದರ ಯಾವುದೇ ಭಾಗವು ಒಂದು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿದ್ದರೆ, ಅಂತಹ ವರದಿಯ ಪ್ರತಿಯನ್ನು ಆ ರಾಜ್ಯದ ರಾಜ್ಯಪಾಲನಿಗೆ ಕಳುಹಿಸಿಕೊಡತಕ್ಕದ್ದು. ಅವನು ಅದನ್ನು, ಆ ರಾಜ್ಯಕ್ಕೆ ಸಂಬಂಧಿಸಿದ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಮತ್ತು ಅಂಥ ಯಾವುದೇ ಶಿಫಾರಸ್ಸನ್ನು ಅಥವಾ ಅದರ ಯಾವುದೇ ಭಾಗವನ್ನು ಒಪ್ಪದೆ ಇರಲು ಕಾರಣಗಳೇನಾದರೂ ಇದ್ದರೆ, ಅವುಗಳನ್ನು ತಿಳಿಸುವ ಜ್ಞಾಪನ ಪತ್ರದೊಂದಿಗೆ ಆ ರಾಜ್ಯದ ವಿಧಾನ ಮಂಡಲದ ಮುಂದೆ ಇಡಲು ವ್ಯವಸ್ಥೆ ಮಾಡತಕ್ಕದ್ದು.

**13. ಅಧಿಕಾರಗಳ ಪ್ರತ್ಯಾಯೋಜನೆ.**- ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಅಥವಾ ಸದಸ್ಯನಿಗೆ ಅಥವಾ ಆಯೋಗದ ಯಾರೇ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**14. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**- ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಧ್ಯಕ್ಷನ, ಉಪಾಧ್ಯಕ್ಷನ, ಸದಸ್ಯರ ಅಥವಾ ಆಯೋಗದ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ನ್ಯಾಯಿಕ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**15. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ,-

(ಎ) 4ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆಯೋಗದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯಮಾಡತಕ್ಕ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 11ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಯನ್ನು ತಯಾರಿಸತಕ್ಕ ನಮೂನೆ ಮತ್ತು ಕಾಲಾವಧಿ;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂತಹ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಸದರಿ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದರೆ, ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

* * *